ಕರ್ನಾಟಕ ಸರ್ಕಾರ

# ಪದವಿ ಪೂರ್ವ ಶಿಕ್ಷಣ ಇಲಾಖೆ

**ನಿರ್ದೇಶಕರ ಕಚೇರಿ, 18 ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

ಕ್ರಮ ಸಂಖ್ಯೆ : ಪಪೂಶಿಇ/ಪರೀಕ್ಷೆ/30/ಇತರೆ/ರಾ.ಕಾ.ಆ-01/2020-21 ದಿನಾಂಕ : 15-02-2021

## : ಸುತ್ತೋಲೆ :

ವಿಷಯ : ರಾಷ್ಟ್ರೀಯ ಕಾಮಧೇನು ಆಯೋಗದ ವತಿಯಿಂದ ನಡೆಸುತ್ತಿರುವ **"ಕಾಮಧೇನು ಗೋ-ವಿಜ್ಞಾನ ಪ್ರಚಾರ-ಪ್ರಸಾರ ಪರೀಕ್ಷೆ"** ಕುರಿತು.

ಉಲ್ಲೇಖ : 1. ಶ್ರೀ ವಲ್ಲಭಭಾಯ್ ಕಠಾರಿಯ, ಅಧ್ಯಕ್ಷರು, ರಾಷ್ಟ್ರೀಯ ಕಾಮಧೇನು ಆಯೋಗ, ಇವರ ಮಿಂಚಂಚೆ, ದಿನಾಂಕ : 22-01-2021.

~~~~~~

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಗೋವು ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಕೃಷಿ, ಆರೋಗ್ಯ, ಆರ್ಥಿಕ, ಪರಿಸರ ಮತ್ತು ವೈಜ್ಞಾನಿಕ ಮುಂತಾದ ರಂಗಗಳಲ್ಲಿ ತುಂಬಾ ಪ್ರಮುಖ ಪಾತ್ರ ವಹಿಸಿದೆ. ಅದು ಕೇವಲ ಹಾಲು ಕೊಡುವ ಹಸುವಾಗಿ ಮಾತ್ರವಲ್ಲದೆ, ಅದರ ಪಂಚಗವ್ಯ, ಮುಖ್ಯವಾಗಿ ಹಸುವಿನ ಸಗಣಿ ಮತ್ತು ಮೂತ್ರ (ಗಂಜಲ) ಗಳು ಜೈವಿಕ ಅನಿಲ, ಜೈವಿಕ ಗೊಬ್ಬರ, ಜೈವಿಕ ಕೀಟನಾಶಕಗಳ ತಯಾರಿಕೆಯಲ್ಲಿ ತುಂಬಾ ಉಪಯುಕ್ತವಾಗಿದ್ದು, ಭೂಮಿಯನ್ನು ರಾಸಾಯನಿಕ ಗೊಬ್ಬರಗಳ ವಿಷಕಾರಕ ಕ್ಷಾರಗಳಿಂದ ಮುಕ್ತಗೊಳಿಸುವಲ್ಲಿ ಬಹು ಮುಖ್ಯವಾದ ಪಾತ್ರ ವಹಿಸುತ್ತದೆ. ಇಷ್ಟೇ ಅಲ್ಲದೆ ಹಸುವಿನ ಸಗಣಿ ಮತ್ತು ಮೂತ್ರ (ಗಂಜಲ) ಗಳು ನಮ್ಮ ದಿನನಿತ್ಯದ ಬಳಕೆಯ ಆಯುರ್ವೇದ ಔಷಧಿಗಳು, ರೋಗ ನಿರೋಧಕ ಶಕ್ತಿಯ ವೃದ್ಧಿಗಾಗಿ, ಅರ್ಕ, ಫಿನೈಲ್, ಸಾನಿಟೈಝರ್, ದೇವರ ವಿಗ್ರಹಗಳ ತಯಾರಿಕೆ, ವಿಭೂತಿ, ಅಗರಬತ್ತಿ, ಧೂಪ, ಪ್ಲೈವುಡ್, ಇಟ್ಟಿಗೆ, ಹೂದಾನಿ, ಸ್ನಾನದ ಸೋಪು, ಶಾಂಪು, ಹಲ್ಲುಜ್ಜುವ ಪುಡಿ, ಸೌಂದರ್ಯ ವರ್ಧಕಗಳು ಮತ್ತಿತರೆ ವಸ್ತುಗಳ ತಯಾರಿಕೆಯಲ್ಲಿ ಬಳಸಲ್ಪಡುತ್ತಿವೆ.

ಗೋವುಗಳ ರಕ್ಷಣೆ ಮತ್ತು ಸಂರಕ್ಷಣೆಯು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದ್ದು, ನಮ್ಮ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳಲ್ಲಿ ಹಸು ನಮ್ಮೆಲ್ಲರ ತಾಯಿ ಮತ್ತು ಮಗುವಿನಂತೆ ನಮ್ಮ ಜೀವನಕ್ಕೆ ತುಂಬಾ ಹತ್ತಿರವಾಗಿದೆ. ಈ ಕಾರಣಕ್ಕಾಗಿ ಹಸು ಸಾರ್ವತ್ರಿಕವಾಗಿ ನಮ್ಮೆಲ್ಲರ ಗೌರವಾದರಗಳಿಗೆ ಪಾತ್ರವಾಗಿದೆ.

ಪಾಶ್ಚಿಮಾತ್ಯ ಮತ್ತು ಆಧುನಿಕ ಜೀವನ ಶೈಲಿಯನ್ನು ಮೈಗೂಡಿಸಿಕೊಂಡಿರುವ ನಮ್ಮ ಯುವ ಜನಾಂಗಕ್ಕೆ ಹಸುವಿನ ಇಷ್ಟೆಲ್ಲಾ ಪ್ರಾಮುಖ್ಯತೆ ಮತ್ತು ಪ್ರಾಧಾನ್ಯತೆಯ ಕುರಿತಾದ ಅರಿವಿನ ಕೊರತೆಯಿದೆ. ಆದ್ದರಿಂದ ನಮ್ಮ ದೇಶದ ಜನ ಸಾಮಾನ್ಯರಲ್ಲಿ ಈ ರೀತಿಯ ಅರಿವಿನ ಕೊರತೆಯನ್ನು ಹೋಗಲಾಡಿಸಿ, ಅವರಲ್ಲಿ ಹಸುವಿನ ರಕ್ಷಣೆ ಮತ್ತು ಸಂರಕ್ಷಣೆಯ ಜ್ಞಾನವನ್ನು ವೃದ್ಧಿಗೊಳಿಸಲು, **"ಗೋಮಯ ಗಣೇಶ", "ಕಾಮಧೇನು ಗೋಮಯ ದೀಪಾವಳಿ"**, ಮುಂತಾದ ಕಾರ್ಯಕ್ರಮಗಳ ಮೂಲಕ **ಭಾರತ ಸರ್ಕಾರದ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನೋದ್ಯಮ ಮಂತ್ರಾಲಯದಡಿಯಲ್ಲಿ, ರಾಷ್ಟ್ರೀಯ ಕಾಮಧೇನು ಆಯೋಗವು 2020 ರಲ್ಲಿ ಸಮಗ್ರ ಅರಿವು ಆಂದೋಲನವನ್ನು ಆಯೋಜಿಸಿದೆ.**

ಮೇಲಿನ ಸಮಗ್ರ ಅರಿವು ಆಂದೋಲನ ಕಾರ್ಯಕ್ರಮಗಳ ಯಶಸ್ಸಿನಿಂದ ಪ್ರೇರಣೆಗೊಂಡ **ರಾಷ್ಟ್ರೀಯ ಕಾಮಧೇನು ಆಯೋಗ (RKA) ವು "ಕಾಮಧೇನು ಗೋ-ವಿಜ್ಞಾನ ಪ್ರಚಾರ-ಪ್ರಸಾರ ಪರೀಕ್ಷೆ"** ಎಂಬ ಮತ್ತೊಂದು ವಿನೂತನ ಕಾರ್ಯಕ್ರಮವನ್ನು ಏರ್ಪಡಿಸಿದೆ. **ಈ ಪರೀಕ್ಷೆಗಳು ಆನ್ ಲೈನ್‌ನಲ್ಲಿ ದಿನಾಂಕ : 25-02-2021** ರಿಂದ ನಾಲ್ಕು ಹಂತಗಳಲ್ಲಿ, ಅಂದರೆ **1. ಪ್ರೈಮರಿ ಹಂತ (1 ರಿಂದ 8 ನೇ ತರಗತಿ ರವರೆಗೆ), 2. ಸೆಕೆಂಡರಿ ಹಂತ (9 ರಿಂದ 12 ನೇ ತರಗತಿ ರವರೆಗೆ), 3. ಕಾಲೇಜು ಹಂತ (12 ನೇ ತರಗತಿಯ ನಂತರ), 4. (ಜನಸಾಮಾನ್ಯರಿಗೆ) ದೇಶದಾದ್ಯಂತ ಏಕ ಕಾಲದಲ್ಲಿ ನಡೆಯುತ್ತಿವೆ.** ಈ ಪರೀಕ್ಷೆಗಳಲ್ಲಿ ಮುಖ್ಯವಾಗಿ ಗೋವು, ಗೋ ಸಂಸ್ಕೃತಿ, ಗೋ ಸಂರಕ್ಷಣೆ, ಗೋವಿನ ಉತ್ಪನ್ನಗಳು ಮತ್ತು ಅದರ ಆರ್ಥಿಕ, ವೈಜ್ಞಾನಿಕ, ಪರಿಸರಾತ್ಮಕ, ಸಾಂಸ್ಕೃತಿಕ ಮತ್ತು
~~~~~~

ಆಧ್ಯಾತ್ಮಿಕ ರಂಗಗಳಲ್ಲಿ ಹಸುವಿನ ಪಾತ್ರ ಕುರಿತಾದ ಪ್ರಶ್ನೆಗಳಿದ್ದು, ಪರೀಕ್ಷೆಯಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ **"ಪ್ರೋತ್ಸಾಹಕ ಪ್ರಶಸ್ಥಿ ಪತ್ರ"**ವನ್ನೂ ಸಹ ವಿತರಿಸಲಾಗುವುದು.

**ಈ ಪರೀಕ್ಷೆ ಕುರಿತಾದ ಹೆಚ್ಚಿನ ಮಾಹಿತಿ ಮತ್ತು ರಿಜಿಸ್ಟ್ರೇಷನ್ ಲಿಂಕ್ ಆಯೋಗದ ಅಂತರ್ಜಾಲ "kamdhenu.gov.in" / "kamdhenu.blog"** ದಲ್ಲಿ ಲಭ್ಯವಿದ್ದು, ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರು, ಮೇಲ್ಕಂಡ ಪರೀಕ್ಷೆಯನ್ನು ಆಯೋಗವು ನಿಗದಿಪಡಿಸಿರುವ ದಿನಾಂಕದಲ್ಲಿ, ಏಕ ಕಾಲದಲ್ಲಿ ನಡೆಸಲು ಕ್ರಮ ಕೈಗೊಳ್ಳುವುದಲ್ಲದೆ, ಈ ವಿಷಯವನ್ನು ಆಯಾ ಕಾಲೇಜುಗಳಲ್ಲಿನ ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ತಂದು, ಈ ಪರೀಕ್ಷೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಪಾಲ್ಗೊಳ್ಳುವಂತೆ ಸೂಕ್ತ ರೀತಿಯ ಕ್ರಮ ಕೈಗೊಳ್ಳಲು ಸೂಚಿಸಿದೆ.

15/02/21

ಜಂಟಿ ನಿರ್ದೇಶಕರು (ಪರೀಕ್ಷೆ)
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿಗಳನ್ನು :

1. ನಿರ್ದೇಶಕರ ಆಪ್ತಶಾಖೆ
2. ರಾಜ್ಯದ ಎಲ್ಲಾ ಜಿಲ್ಲೆಗಳ ಪಪೂಶಿ ಇಲಾಖೆಯ ಉಪ ನಿರ್ದೇಶಕರಿಗೆ
3. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ
4. ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಇ.ಆಡಳಿತ ಶಾಖೆಗೆ
5. ಕಚೇರಿ ಪ್ರತಿ.

Caption:

Kamadhenu Gau-Vigyan prachar-prasar Examination Conducted by Rashtriya Kamadhenu ~~Aayog~~ Aayog (RKA)